**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರವಾಗಿ ಶ್ರೀ ಆರ್.ಎಸ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಈ ದಾವೆಗೆ ಪೂರಕವಾಗಿ ನಾನು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ. ಸಾಕ್ಷಿ ಹಾಜರುಪಡಿಸಿದ ದಾಖಲೆಗಳನ್ನು ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.–1 | ಅಧಿಕಾರ ಪತ್ರ |
| ನಿ.ಪಿ.–2 ಮತ್ತು 3 | ಪಹಣಿಗಳು |
| ನಿ.ಪಿ.–4 | ಹಿಸ್ಸಾ ಮೋಜಣಿ ದಾಖಲಾತಿ |
| ನಿ.ಪಿ.–5 | ಆಕಾರ್ ಬಂದ್ ಹುತ್ತಾರು |
| ನಿ.ಪಿ.–6 | ಎ.ಡಿ.ಎಲ್.ಆರ್ ರವರ ಆದೇಶದ ದೃಢಿಕೃತ ನಕಲು |
| ನಿ.ಪಿ.–7 | ಲೀಗಲ್ ನೋಟಿಸು |
| ನಿ.ಪಿ.–8 | ಅಂಚೆ ರಶೀದಿ |
| ನಿ.ಪಿ.–9 | ಅಂಚೆ ಸ್ವೀಕೃತಿ |
| ನಿ.ಪಿ.–10 | ಉತ್ತರ ಪತ್ರ |

**ಈ ಹಂತದಲ್ಲಿ ಸಾಕ್ಷಿ ಕಡೆಯಿಂದ ಮತ್ತಷ್ಟು ದಾಖಲೆಗಳನ್ನು ಹಾಜರು ಪಡಿಸುವ ಸಲುವಾಗಿ ವಾದಿ ಪರ ವಕೀಲರು ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**Sd/-**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**

**ಭದ್ರಾವತಿ.**